according to the order paper for the day. I am, therefore of the opinion that, it will not be possible to hold that the House was not in order when such situations arise.

Sri M. S. Krishnan raised two other points. His first plea was that the Minister for Rural Development did not move the demands for grants relating to Rural Development and Social Welfare. This is not correct factually. When I called the Minister to move the demands he did so. The second point raised by Sri M. S. Krishnan was that according to the agenda for that day I should have taken up the discussion for short duration relating to the scarcity conditions in some districts before going to the discussion of demands relating to the Rural Development and Social Welfare. In this connection I may state that, it had been agreed that, the short duration discussions and the supplementary demends should be taken up at the morning session and that, the demands relating to Rural Development and Social Welfare would be taken up in the afternoon session on the 14th March. I regulated the proceedings according to this agreement. In addition to this I wish to draw the attention of the members to rule 27 of the rules of procedure according to which the order of business can be varied if the Speaker is satisfied that there is sufficient ground for such variation. By virtue of this provision in the rules. I proceeded to the item relating to the demands for grants leaving out the short duration discussion in the light of the earlier agreement.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಮತ್ತು ಮಾನ್ಯ ಸದಸ್ಯರಾದ ಶ್ರೀ ಕೋಣಂದೂರು ಲಿಂಗಪ್ಪನವರು ನಿನ್ನೆ ದಿವಸ ಒಂದು ನಿಲುವಳಿ ಸೂಚನೆಯನ್ನು ತಮ್ಮ ಒಪ್ಪಿಗೆಗಾಗಿ ಕಳುಹಿಸಿಕೊಟ್ಟಿದ್ದೇವೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಇದರ ಬಗ್ಗೆ ಸ್ಟೇಟ್‌ಮೆಂಟ್ ಮಾಡುವುದು ಇದ್ದರೆ ಮಾಡಬಹುದು.

Statement by the Minister for Food and Civil Supplies

re : **Mis-management in the TAPCM Society of Shimoga**

†**Smt. E. E. VAZ** (Minister for Food and Civil Supplies)—Yesterday two hon. members Sriyuths Kagodu Thimmappa and S. Bangarappa raised an important issue about the alleged misappropriation of levy paddy stocks at Holalur Rice Mill of TAPCMS, Shimoga. I have received a report from the Deputy Commissioner, Shimoga and I am making the following statement.

The Deputy Commissioner says as follows :—

"On the night of 6th March 1975, a few persons met me and informed that a few bags of procured paddy kept in the TAPCMS Rice mill at Holalur, Shimoga Taluk has been replaced by bags containing paddy husk. Immediately I requested the Deputy Registrar of Co-operative Societies and

the Assistant Manager, Karnataka Food and Civil Supplies Corporation, Shimoga, to verify the stocks of procured paddy kept in the rice mill. The rice mill at Holalur is used both for hulling purpose and also for stocking of procured paddy.

The Deputy Registar of Co-operative Societies after checking the stock has reported that the stock of paddy in the rice mill was not in a countable position and was not arranged varietywise. He has stated that as the stock was in disorderly condition it could not be checked and verified. On actual verification of one lot ket in the left side of the entrance of the rice mill, it was found that about ten bags of wet paddy husk was kept in the middle of the stock. The allegation of replacement of some bags of paddy by bags containing paddy husk was found to be true. The rice mill and the stock of procured paddy kept in the mill is in the custody of one Shri M. Siddappa, Clerk of TAPCMS, Shimoga. The Deputy Registrar has further reported that Shri Siddappa has admitted in writing that there is replacement of paddy by paddy husk to the extent of 105 bags. He has further admitted that the shortage in stock is about 200 bags out of which he has made good 95 bags of paddy. Shri Siddappa has further admitted that he has not brought this fact to the notice of the President or Secretary of TAPCMS, Shimoga. The enquiries made reveal that Shri Siddappa has been doing paddy business for some time.

After receivinig the report of the Deputy Registrar of Co-operative Societies, I requested the President and Secretary of TAPCMS Shimoga to lodge a complaint with the Police and accordingly a case has been registered in Cr. No. 41/75 under Sec. 408 and Sec. 420 I.P.C. and the matter is under investigation. In the meanwhile the rice mill at Holalur and other godwon belonging to TAPCMS Shimoga have been sealed by Officers of Co-operation Department, Revenue and KFCS in the presence of office-bearers of TAPCMS Shimoga for thorough checking of stocks. The stock in the rice mill premises is about 6000 bags of paddy and arrangements have been made to check the stock thoroughly by deputing officers of Co-operation Department, K. F. C. S. Corporation, President and Secretary and Directors of TAPCMS Shimoga. The exact deficit and the extent of replacing of paddy by paddy husk will be known after the physical verification of stocks. In the meanwhile, I have requested the President and Secretary of TAPCMS Shimoga to keep Shri M. Siddappa under suspension as there is a prima-facie case of misappropriation and mischief by him. I will be sending further report in the matter after the verfication of stocks.

In the meanwhile, I would like to inform the hon. members that we are following up the case and suitable action will be taken on getting the complete report."

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ನಮಗೆ ಬಹಳ ಆಶ್ಚರ್ಯವಾಗುತ್ತಿದೆ. ಯಾರು ಕಳ್ಳತನ ಮಾಡಿದ್ದಾರೆ, ಇವತ್ತು ತಪ್ಪಿಸಿಕೊಂಡು, ಅದನ್ನು ಗುಮಾಸ್ತನ ಮೇಲೆ ಹಾಕುವುದಕ್ಕೆ ಹೊರಟಿದ್ದಾರೆ.

ಅಧ್ಯಕ್ಷರು.—ಅದನ್ನು ಅವನೇ ಒಪ್ಪಿಕೊಂಡರೇ ಏನು ಮಾಡುತ್ತೀರಿ ?

ಶ್ರೀ ಕಾಗೋಡು ತಿಮ್ಮಪ್ಪ.—ಡೆಪ್ಯುಟಿ ಕಮಿಷನರರಿಂದ ನುದ್ದಿ ಬಂದ ತಕ್ಷಣ ಎಲ್ಲಾ ಮಾಲನ್ನೂ ಸೀಜ್ ಮಾಡುವ ಬದಲಿಗೆ ಫಿಸಿಕಲ್ ವೆರಿಫಿಕೇಷನ್ ಮಾಡುವುದಕ್ಕಾಗುವುದಿಲ್ಲ, ಎಂದು ರಿಪ್ಲೇಸ್‌ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದು ಆಧ್ಯಕ್ಷರು ಮತ್ತು ಕಾರ್ಯದರ್ಶಿಗಳು ತಪ್ಪಿಸಿಕೊಳ್ಳುವುದಕ್ಕೆ ಮಾಡಿರತಕ್ಕ ಪ್ರಯತ್ನ. ದಯವಿಟ್ಟು ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರಿಗೆ ಅವಕಾಶ ಮಾಡಿಕೊಡದೆ ಅವರನ್ನೂ ಕೂಡ ಹೊರಗೆ ಇಡಿ ; ಎಲ್ಲಾ ಮಾಲನ್ನೂ ವೆರಿಫಿಕೇಷನ್ ಮಾಡುವ ಪ್ರಯತ್ನ ಮಾಡಬೇಕು. ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಿಬ್ಬರೂ ಸಂಭಾವಿತರು ಎಂದು ತಿಳಿದುಕೊಂಡು ಅವರನ್ನು ಮುಂದುವರಿಸಿಕೊಂಡು ಹೋಗಿ, ಯಾರೋ ಗುಮಾಸ್ತನನ್ನು ನೇಣು ಹಾಕುವುದಕ್ಕೆ ಹೊರಟಿದ್ದಾರೆ.

ಶ್ರೀಮತಿ ಇ. ಇ. ವಾಜ್.—ಅವನು ತಪ್ಪು ಮಾಡಿದ್ದೇನೆ ಎಂದು ಒಪ್ಪಿಕೊಂಡಿದ್ದಾನೆ. ಮಾನ್ಯ ಸದಸ್ಯರು ಏತಕ್ಕೆ ಹೀಗೆ ಟೀಕೆ ಮಾಡುತ್ತಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಾ ಇಲ್ಲ. ಇದರ ಬಗ್ಗೆ ಪೂರ್ಣ ವರದಿ ಬಂದ ಮೇಲೆ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕೋ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಸಂಘದ ಗುಮಾಸ್ತನ ಸ್ವಾಧೀನದಲ್ಲಿ ಒಂದು ಗೋಡೌನ್ ಇರುತ್ತದೆಯೇ ? ಇದೊಂದು ಸಣ್ಣ ವಿಷಯ ; ಸಾಮಾನ್ಯ ವ್ಯವಹಾರಸ್ಥನಿಗೂ ಗೊತ್ತಾಗುತ್ತದೆ. ಆದುದರಿಂದ, ತಾವು ಏನು ಹೇಳಿದ್ದೀರಿ, ಅದನ್ನು ಪುನರ್‌ಪರೀಲನೆ ಮಾಡಿ ; ಈಗ ಇವನ್ನೇ ನಂಬಿ ಕ್ರಮ ತೆಗೆದುಕೊಳ್ಳುವುದು ಬೇಡ. ನಿಜವಾಗಿ ಸಂಘದ ಗೋಡೌನ್‌ನ್ನು ಒಬ್ಬ ಗುಮಾಸ್ತನ ಕೈಗೆ ಕೊಡುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಅಕೌಂಟೆಂಟೋ ಮ್ಯಾನೇಜರೋ ಅಥವಾ ಕಾರ್ಯದರ್ಶಿಯವರು ಇರಬಹುದು. ನ್ಯಾಯವಾಗಿ, ಕಾರ್ಯದರ್ಶಿಯೇ ಸಂಘದ ಮೇಲ್ವೀಚಾರಕ ; ಒಬ್ಬ ಗುಮಾಸ್ತನಲ್ಲ. ಆದುದರಿಂದ, ತಾವು ಕ್ರಮ ತೆಗೆದುಕೊಳ್ಳುವುದಾದರೆ, ಎಲ್ಲಿರತಕ್ಕ ಅಧ್ಯಕ್ಷರ ಮತ್ತು ಕಾರ್ಯದರ್ಶಿಗಳವರ ಮೇಲೆ ಏನಃ ಆ ಗುಮಾಸ್ತನ ಮೇಲಲ್ಲ. ಆದುದರಿಂದ, ತಾವು ಇದನ್ನು ಪುನರ್ ಪರಿಶೀಲನೆ ಮಾಡಿ ಮತ್ತ ಇಲಾಖಾ ಅಧಿಕಾರಿಗಳನ್ನು ಕೂಡಲೇ ಕಳುಹಿಸಿಕೊಟ್ಟು, ಅದನ್ನು ಪರಿಶೀಲನೆ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಅಷ್ಟೇ ಅಲ್ಲ, ಅಧ್ಯಕ್ಷರೆ, ಕಾರ್ಯದರ್ಶಿಗಳು ಮತ್ತು ಡೈರೆಕ್ಟರುಗಳು ಇದಕ್ಕೆ ಸಂಪೂರ್ಣವಾಗಿ ಜವಾಬ್ದಾರರು ಎನ್ನುವ ವಿಷಯ, ಜನಜನಿತವಾದ ವಿಷಯ, ಇದು ಸತ್ಯವಾದ ವಿಷಯ. ಹಾಗಿರಬೇಕಾದರೆ ಒಬ್ಬ ಗುಮಾಸ್ತನನ್ನು ಸರ್ಕಾರಿ ನೌಕರನನ್ನು ಹಿಡಿದು ಹಾಕಿರುವುದು ಯಾವ ವಿಷಯ ? ಈಗ ಆಹಾರ ಮಂತ್ರಿಗಳು ಭ್ರಷ್ಟಾಚಾರ ಮಾಡಿದ್ದಾರೆ ಎಂದು ಇಟ್ಟುಕೊಳ್ಳಿ ...

ಅಧ್ಯಕ್ಷರು.—ಈ ವಿವರಣೆ ಎಲ್ಲಾ ಬೇಡ.

ಶ್ರೀ ಕೋಣಂದೂರು ಲಿಂಗಪ್ಪ.—ಹೀಗೆ ಪ್ರಭಾವಕ್ಕೆ ಒಳಗಾಗಿರುವಾಗ, ಅಧ್ಯಕ್ಷರು, ಮತ್ತು ಕಾರ್ಯದರ್ಶಿ ಬಿಟ್ಟು ಗುಮಾಸ್ತನನ್ನು ಹಿಡಿದಿದ್ದಾರೆ. ಇದು ಎಲ್ಲರಿಗೂ ಗೊತ್ತಿದೆ ಶಿವಮೊಗ್ಗ ಜನರಿಗೆ ಗೊತ್ತಿದೆ, ಹಾಗಿದ್ದರೂ ಕೂಡ ಗುಮಾಸ್ತನನ್ನು ಹಿಡಿದಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ನನಗೆ ಸ್ಪಷ್ಟೀಕರಣ ಬೇಕು.

ಅಧ್ಯಕ್ಷರು —ಇನ್ನು ಆಹಾರ ಶಾಖೆಯ ಡಿಮ್ಯಾಂಡ್ ಆಗಬೇಕು, ಉತ್ತರ ಕೊಡಬೇಕಾದು ಇದೆ, ಅನಂತರ ತಾವು 15 ಜನರ ಲಿಸ್ಟ್ ಕಳುಹಿಸಿದರೆ ನಾನು ಏನು ಮಾಡಬೇಕು ?

ಶ್ರೀ ಎಸ್. ಬಂಗಾರಪ್ಪ.—ಈಗ ಸರ್ಕಾರದವರು ಸರಿಯಾದ ಕ್ರಮ ತೆಗೆದುಕೊಳ್ಳದಿದ್ದರೆ ಏನು ಮಾಡಬೇಕು ? ನೆನ್ನೆ ಹೇಳಿದ ಉತ್ತರ ಬಂದಿಲ್ಲ ಕಳೆದಸಾರಿ 1,200 ಚೀಲ ಚಿಲ್ಲರೆ ಭತ್ತ ಹೋಗಿದೆ. ಇವರು ಹೇಳಿರುವುದು ಕಡಿಮೆ. ಜೊತೆಗೆ ಈ ಅಪಾದನೆ ಅಸೆಂಬ್ಲಿಯಲ್ಲಿ ಬರುತ್ತದೆ

ಎಂದು ಗೊತ್ತಾದ ತಕ್ಷಣ ಏನು ಮಾಡಿದ್ದಾರೆ ಎಂದರೆ ಶಿವಮೊಗ್ಗ ಟಿ.ಎ.ಪಿ.ಸಿ.ಎಮ್.ಸಿ ಅಧ್ಯಕ್ಷರು, ಕಾರ್ಯದರ್ಶಿಯವರು ಸೇರಿ ರಾತ್ರಿ ಎಲ್ಲೆಲ್ಲೋ ಕಳುಹಿಸಿ ಹೊಸ ಭತ್ತ ತುಂಬಿಸಿದ್ದಾರೆ ಈಗ ಹಳೇ ಭತ್ತಕ್ಕೂ ಹೊಸ ಭತ್ತಕ್ಕೂ ವ್ಯತ್ಯಾಸ ಇರುತ್ತದೆ, ಇದನ್ನು ಪರೀಕ್ಷೆ ಮಾಡಲಕ್ಕೆ ಪರಿಣತರನ್ನು ಕಳುಹಿಸಿಕೊಟ್ಟಿಲ್ಲ,

ಅಧ್ಯಕ್ಷರು.—ಹಳೇ ಭತ್ತ ಮತ್ತು ಹೊಸ ಭತವನ್ನು ಕಂಡುಹಿಡಿಯುವುದಕ್ಕೆ ಪರಿಣತರು ಬೇಕೇನು ?

ಶ್ರೀ ಎಸ್. ಬಂಗಾರಪ್ಪ.—ಹಾಗೆ ಜನ ಹೇಳಿದರೆ ಒಪ್ಪುವುದಿಲ್ಲ ಎಂದು ನಾನು ಹೇಳುತ್ತಿದ್ದೇನೆ. ಅಲ್ಲಿ ಅಕೌಂಟ್ ಪುಸ್ತಕಗಳನ್ನು ಇನ್ನು ಸೀಜ್ ಮಾಡಿಲ್ಲ. ಬೇರೆ ಗಾಡನ್‌ಗಳನ್ನು ಸೀಜ್ ಮಾಡಿಲ್ಲ. ಟಿ.ಎ.ಪಿ.ಸಿ.ಎಮ್.ಸಿ. ಗಾಡನ್ ಸೀಜ್ ಮಾಡಿಲ್ಲ, ಅಲ್ಲಿಂದ ರವಾನೆ ಹಗಲು ರಾತ್ರಿ ನಡೆಯುತ್ತಿದೆ. ಇದುವರೆಗೆ ಸರ್ಕಾರದಿಂದ ಹೇಳಿಕೆ ಬಂದಿಲ್ಲ. ಮತ್ತೆ ನನ್ನ ಸೊರಬ ವಿಷಯ ಎತ್ತಿದ್ದೆ, ಆದರ ಪ್ರಸ್ತಾಪ ಮಾನ್ಯ ಮಂತ್ರಿಗಳು ಮಾಡಿಲ್ಲ.

ಶ್ರೀಮತಿ ಇ. ಇ. ವಾಜ್.—ನನ್ನಲ್ಲಿ ಇದ್ದ ಮಾಹಿತಿ ತಕ್ಷಣ ಕೊಟ್ಟಿದ್ದೇನೆ.

Sri S. BANGARAPPA.—Are you going to make statements by instalments ?

Smt. E. E. VAZ.—We must be given sometime to collect the information. This is only a preliminary report which was received yesterday and the same has been read out by me.

Sri S. BANGARAPPA.—Not a single word is mentioned about Soraba.

Sri M. S. KRISHNAN.—The Food Minister must tell us that when would seize the stock of entire paddy ?

Smt. E. E. VAZ.—I may inform the hon. members that according to by-law, the Secretary is also responsible and the Government is looking into the matter. On receipt of a report, action will be taken against the concerned officials according to rules. Nobody will be allowed to got scotfree.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಸೊರಬ ತಾಲೋಕಿನ ವಿಷಯ ಒಂದು ಮಾತನ್ನು ಹೇಳಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಅಲ್ಲಿ ಡೆಪ್ಯುಟಿ ರಿಜಿಸ್ಟ್ರಾರ್ ಅವರು ಇದ್ದಾರೆ, ಊಟಕ್ಕೆ ಅಕ್ಕಿ ಮನೆಗೆ ಸಾದೆ ಎಲ್ಲಾ ಅವರಿಗೆ ಕೊಡುತ್ತಾರೆ, ಅಧ್ಯಕ್ಷರೇ ಅದನ್ನು ಹೇಳುವುದಕ್ಕೆ ನಾಚಿಕೆ ಯಾಗುತ್ತದೆ.

ಶ್ರೀ ಎಸ್, ಬಂಗಾರಪ್ಪ—ಅಲ್ಲಿ ಡೆಪ್ಯುಟಿ ರಿಜಿಸ್ಟ್ರಾರ್ ಅವರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆ ವಿಷಯ ಬೇಕಾದರೆ ಅಧ್ಯಕ್ಷರೇ ತಮ್ಮ ಚೇಂಬರ್‌ನಲ್ಲಿ ತಿಳಿಸುತ್ತೇನೆ. ಈಗ ಡೆಪ್ಯುಟಿ ರಿಜಿಸ್ಟ್ರಾರ್ ಅವರನ್ನು ಸಸ್ಪೆನ್‌ಷನ್‌ನಲ್ಲಿ ಇಡಿ. ಅಲ್ಲಿ ಕೃಷ್ಣನ ರೆಕ್ಕಕ್ಕೆ ಡೆಪ್ಯುಟಿ ರಿಜಿಸ್ಟ್ರಾರ್ ಅವರೇ ಕಾರಣ, ಅಲ್ಲಿರತಕ್ಕ ಕುಲಕರ್ಣಿ ಎನ್ನುವವರನ್ನು ಸಸ್ಪೆನ್‌ಷನ್‌ನಲ್ಲಿ ಇಡಿ.

Smt. E. E. VAZ.—When the Co-operation Department demands are taken up, the Minister concerned will be answering them.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಇವರು ಮಂಗಳೂರಿಗೆ ಹೋಗಿ ರಾರಿ ಹಿಡಿದಿದ್ದಾರೆ, ಸೊಸೈಟಿಗೆ ಹೋಗಿ ಏತಕ್ಕೆ ಚೆಕ್ ಮಾಡಬಾರದು ?

ಶ್ರೀ ಕೆ. ಎಚ್. ಹನುಮೇಗೌಡ.—ತಾಲ್ಲೂಕು ಸೊಸೈಟಿ ಜವಾಬ್ದಾರಿ ಸೆಕ್ರೆಟರಿಯವರದು, ಕೆಳಪಟ್ಟ ಅಧಿಕಾರಿಗಳು ಹೇಳಿದ ಹಾಗೆ ಕೆಲಸ ಮಾಡುತ್ತಾರೆ. ಪೂರ್ಣ ಜವಾಬ್ದಾರಿ ಯಾರಿಗೂ ಕೊಟ್ಟಿರಲಿಲ್ಲ. ವಿಧಿನಿಯಮ ಚನ್ನಬಸಪ್ಪನವರ ಪ್ರಕಾರ ಸಂಬಂಧಪಟ್ಟದ್ದನ್ನು ಅತನ ಕೈಕೆಳಗೆ ಇರತಕ್ಕ ಅಧಿಕಾರಿಗಳು ಅವನು ಹೇಳಿದಹಾಗೆ ಕೆಲಸವಾಡಿಕೊಂಡು ಹೋಗುತ್ತಾರೆ. ನನಗೆ

ಅನುಮಾನ ಬರುತ್ತಿದೆ, ಯಾರೋ ಸಾಮೂಲಾಗಿ ದೊಡ್ಡವರನ್ನು ಬಿಟ್ಟು ಬಡಪಾಯಿಯನ್ನು ನೇಣು ಹಾಕುವುದಕ್ಕೆ ಹೊರಟಿದ್ದಾರೆ. ಮೊದಲನೆಯದಾಗಿ ಅಪರಾಧ ಇದ್ದರೆ ಕಾರ್ಯದರ್ಶಿಯವರದು ಇರುತ್ತದೆ. ಇದನ್ನು ವಿಚಾರ ಮಾಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ನೆನ್ನೆ ದಿವಸ ನಾನು ಒಂದು ಪ್ರಶ್ನೆ ಎತ್ತಿದ್ದೆ ಹೆಚ್.ಎಂ.ಟಿ. ಬಗ್ಗೆ ಹೇಳಿಕೆ ಕೊಡಬೇಕು ಎಂದು, ತಾವು ಒಪ್ಪಿಕೊಂಡಿದ್ದಿರಿ.

ಅಧ್ಯಕ್ಷರು,—ಇವೊತ್ತು ಉತ್ತರ ಆಗಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಅಲ್ಲ 3-4 ಸಾವಿರ ಜನರ ಪ್ರಶ್ನೆ ಇದೆ. ಅವರು ಕೆಲಸ ಇಲ್ಲದೆ ಇದ್ದಾರೆ. ಈಗ ಬಹಳ ತೊಂದರೆಯಾಗಿರುವುದರಿಂದ ಈ ವಿಷಯ ಎತ್ತಿದ್ದೇನೆ. ಇವೊತ್ತಿನ ಲಿಸ್ಟ್‌ನಲ್ಲಿ ಇಲ್ಲ, ಹೇಗೆ ಮಾಯವಾಯಿತೋ ಗೊತ್ತಿಲ್ಲ.

BUDGET ESTIMATES FOR 1975-76

Demands for Grants

(Demand Numbers : 5, 6, 33, 35 and 36—*Debate Contd.*)

†ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸಭೆಯಮುಂದೆ ಇರತಕ್ಕ ಬೇಡಿಕೆಗಳ ವಿಷಯದಲ್ಲಿ ಈ ಸಭೆಯ ಮಾನ್ಯ 13 ಜನ ಸದಸ್ಯರು ಇದನ್ನು ಪ್ರಸ್ತಾಪ ಮಾಡಿದ್ದಾರೆ, ಅನೇಕರು ಬಹಳ ಉತ್ತಮವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ಮಾನ್ಯ ಸದಸ್ಯರು ಒಳ್ಳೆಯ ವಿಚಾರವನ್ನು ಕೊಟ್ಟಿದ್ದಾರೆ. ಇನ್ನು ಒಬ್ಬಿಬ್ಬರು ಮಾನ್ಯ ಸದಸ್ಯರು ನೀವು ಈ ತಪ್ಪಿಗೆ ಈ ಕೆಲಸವನ್ನು ಸಮರ್ಪಕವಾಗಿ ಮಾಡದೆ ಶಾಪಗ್ರಸ್ಥರಾಗಬೇಡಿ ಎಂದು ಬಹಳ ಅಕ್ಕರೆಶದಿಂದ ಹೇಳಿದ್ದಾರೆ. ಮಾನ್ಯ ಸದಸ್ಯರು ಇದರ ಜೊತೆ ನಾನು ಮಾಡಿರತಕ್ಕ ಅಲ್ಪಸ್ವಲ್ಪ ಕೆಲಸಗಳ ವಿಷಯದಲ್ಲಿ ನನ್ನ ಬೆನ್ನುತಟ್ಟತಕ್ಕ ಕೆಲಸವನ್ನು ಮಾಡಿದ್ದಾರೆ ಎಂದು ಹೇಳಿದ್ದಾರೆ. ಈ ಎಲ್ಲಾ ವಿಷಯವನ್ನು ಸಭೆಯಗಮನಕ್ಕೆ ತಂದುದಕ್ಕಾಗಿ ನಾನು ಮಾನ್ಯಸದಸ್ಯರಿಗೆ ಕೃತಜ್ಞತೆಯಿಂದ ವಂದಿಸುತ್ತೇನೆ. ಮುಖ್ಯವಾಗಿ ಈ ಭೂ ಸುಧಾರಣೆ ಜಾರಿಗೆ ಕೊಡತಕ್ಕ ವಿಷಯದಲ್ಲಿ ನಿಧಾನವಾಗಿರತಕ್ಕದ್ದು, ಸಿಬ್ಬಂದಿ ಒದಗಿಸದೇ ಇರತಕ್ಕದ್ದು, ಇನ್ನು ಕೆಲವು ತಿದ್ದುಪಡಿಗಳನ್ನು ತರತಕ್ಕ ಅವಕಾಶ ಇರತಕ್ಕಂಥಾದ್ದು ಇರುತ್ತವೆ, ಇವನ್ನೆಲ್ಲಾ ಪ್ರಸ್ತಾಪಮಾಡಿದ್ದಾರೆ, ಆದರ ಜೊತೆ ಈ ಚರ್ಚೆಯನ್ನು ಪ್ರಾರಂಭ ಮಾಡಿದಂತಹ ಶ್ರೀಮಾನ್ ತಿಮ್ಮಪ್ಪನವರು ಇದು ಜಾರಿಗೆ ಬರಬೇಕಾದರೆ ಇದಕ್ಕೆ ಸಾಕಷ್ಟು ನಿಷ್ಠೆ, ತ್ಯಾಗ ಮತ್ತು ದಾಷ್ಟ್ಯ ಬೇಕು ಎಂದು ಹೇಳಿದ್ದಾರೆ. ಈ ಕಾನೂನಿಗೆ ಮೊಟ್ಟಮೊದಲು ತಿದ್ದುಪಡಿತರತಕ್ಕ ಸಂದರ್ಭದಲ್ಲಿ ಇದನ್ನು ಜಾರಿಗೆ ತರಬೇಕಾದರೆ ಏನು ಏನು ಅವಶ್ಯಕ ಎನ್ನುವುದನ್ನು ಪೂರ್ವದಿಂದ ಆಲೋಚನೆ ಮಾಡಿ ಈ ಕಾನೂನನ್ನು ಜಾರಿಗೆ ತಂದಿದ್ದೇವೆ. ಹಾಗೆ ತಂದಮೇಲೆ ಏನು ಅಡ್ಡಿ ಆಡಚಣೆ ಇದೆ ಎನ್ನುವ ವಿಚಾರ ಕೂಡ ನಮಗೆ ಇದೆ. ಅನೇಕ ಶತಮಾನಗಳಿಂದ ಈ ಭೂಮಿಯನ್ನು ಅನುಭವಿಸಿಕೊಂಡು ಬಂದವರು ಸುಲಭವಾಗಿ ಕಳೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ನಾನಾ ವಿಧವಾದ ಬುದ್ಧಿವಂತಿಕೆ ಉಪಯೋಗಿಸಿ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾನೆ ಎನ್ನುವುದು ಕೂಡ ನಮಗೆ ಗೊತ್ತಿದೆ. ಅಷ್ಟೇ ಅಲ್ಲ ಇದಕ್ಕೆ ಅನೇಕತರಹ ತೊಂದರೆಗಳಿವೆ. ಈ ಅಕ್ಷನ್ನು ಜಾರಿಗೆ ತರುವಾಗ, ನಾವು ನೇಮಿಸಿರತಕ್ಕ ಟ್ರಿಬ್ಯುನಲ್‌ಗಳಲ್ಲಿ ಏನೇನು ತೊಂದರೆಗಳಿವೆ ಎನ್ನುವ ವಿಷಯದ ಬಗ್ಗೆ ಕೂಡ ಮಾನ್ಯ ಸದಸ್ಯರು ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ನಾನು ಮುಖ್ಯವಾಗಿ ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

9-30 P.M.

ಒಂದನೆಯದು ಸ್ವಂತ ಹಿಡುವಳಿದಾರರಿಗೆ, ವಿಧವೆಯರಿಗೆ ಹಾಗೂ ಅಂಗವಿಕಲರಿಗೆ ಪರಿಹಾರ ಕೊಡುವಾಗ ಸಾಕಾದಷ್ಟು ಹಣ ಒದಗಿಸಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು ಹಣ ಈಗಿರುವ ಹಾಗೆ ಈ ವರ್ಷದ ಆಯವ್ಯಯದಲ್ಲಿ ಒಂದು ಕೋಟಿ ರೂಪಾಯಿಯನ್ನು ನಾವು ಒದಗಿಸಿದ್ದೇವೆ. ಅಷ್ಟೇ ಅಲ್ಲದೆ ಈಗಾಗಲೇ ನನ್ನ ಈ ವರ್ಷದ ವರದಿಯಲ್ಲಿ ಕೊಟ್ಟಿರುವ ಹಾಗೆ ಭೂ ಅಭಿವೃದ್ಧಿ